ದಿನಾಂಕ**: 23.06.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಹೆಚ್ ಎನ್ ಕೆ ವಕೀಲರಿಂದಃ-

ನಾನು ದ್ವಿತೀಯ ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ನಾರಾಯಣಪ್ಪ ಮತ್ತು ಅವರ ಕುಟುಂಬದವರ ಮೇಲೆ ಈ ದಾವೆಯನ್ನು ಸಲ್ಲಿಸಿದ್ದೇನೆ. ನಾನು 5-6 ಜನರ ಮೇಲೆ ಈ ದಾವೆಯನ್ನು ಸಲ್ಲಿಸಿದ್ದೇನೆ. ನಾನು ದಾವೆಯನ್ನು ಎಷ್ಟು ಜನರ ಮೇಲೆ ಹಾಕಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸ.ನಂ.60 ರಲ್ಲಿ ಸುಮಾರು 100 ಎಕರೆ ವಿಸ್ತೀರ್ಣ ಇರುತ್ತದೆ. ಸ.ನಂ.60 ರಲ್ಲಿ ನನಗೆ ಸೇರಿದ ಆಸ್ತಿ ಒಟ್ಟು 2 ವರೆ ಎಕರೆ ಇದೆ. ಸ.ನಂ.60 ರಲ್ಲಿ ನಾನು ಒಟ್ಟು 50 ಎಕರೆ ಜಮೀನನ್ನು ಖರೀದಿಸಿರುತ್ತೇನೆ. ಸ.ನಂ.60 ರಲ್ಲಿ ಸುಮಾರು 60 ಎಕರೆ ಆಸ್ತಿಗೆ ಕಾಂಪೌಂಡ್ ಹಾಕಿರುತ್ತೇವೆ. ಸ.ನಂ.60 ರಲ್ಲಿರುವ ಜಮೀನು ಸರ್ಕಾರಿ ಗೋಮಾಳ ಎಂದರೆ ಸರಿ. ಸ.ನಂ.60 ರಲ್ಲಿ ಈವರೆಗೂ ಸುಮಾರು ಜಮೀನಿಗೆ ಸಂಬಂಧಿಸಿದಂತೆ ದುರಸ್ತಿ ಆಗಿಲ್ಲ ಎಂದರೆ ಸರಿ.

2. ನಾನು ದಾವೆಯನ್ನು ಸಲ್ಲಿಸುವ ವೇಳೆಗೆ ದಾವಾ ಸ್ವತ್ತು ಭೂ ಪರಿವರ್ತನೆ ಆಗಿತ್ತು ಎಂದರೆ ಸರಿ. ಭೂ ಪರಿವರ್ತನೆ ಆದ ನಂತರ ಆರ್ ಟಿ ಸಿ ಮುಂದುವರೆಯುವುದಿಲ್ಲ ಎಂದರೆ ಸರಿ. ಭೂ ಪರಿವರ್ತನೆ ಆದ ನಂತರ ಪಂಚಾಯಿತದಿಂದ ಇ-ಸ್ಕೆಚ್ ಮಾಡಿ ಫಾರಂ.9 ಮತ್ತು 10 ನ್ನು ಮಾಡಿಸಿ ಖಾತೆ ಮಾಡಿಸಬೇಕು ಎಂದರೆ ಸರಿ. ಆ ರೀತಿ ದಾವಾ ಸ್ವತ್ತನ್ನು ಪಂಚಾಯತಿಯವರು ಖಾತೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಭೂ ಪರಿವರ್ತನೆ ಆದ ನಂತರ ಸಂಬಂಧಪಟ್ಟ ಕಚೇರಿಗೆ ಖಾತೆ ಮಾಡಿಸಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

3. ದಾವಾ ಸ್ವತ್ತು ಭೂ ಪರಿವರ್ತನೆ ಆಗಿದೆ ಎಂದು ದಾವಾ ಷೆಡ್ಯೂಲ್ ನಲ್ಲಿ ನಮೂದು ಮಾಡಿರುತ್ತೇನೆ. ಷೆಡ್ಯೂಲ್ ನಲ್ಲಿ ಭೂ ಪರಿವರ್ತನೆ ಆಗಿದೆ ಎಂದು ನಮೂದಿಸಿಲ್ಲ, ಕೃಷಿ ಜಮೀನು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ದಾವೆ ಸಲ್ಲಿಸುವ ವೇಳೆಗೆ ಸ.ನಂ.101/1, 101/2 ಎಂದು ವಿಭಾಗ ಆಗಿರುತ್ತದೆ. ಆ ಪ್ರಕಾರ ಸದರಿ ಸರ್ವೇ ನಂಬರ್ ಗಳಲ್ಲಿ ಚೆಕ್ಕುಬಂದಿ ಬೇರೆ ಬೇರೆ ಇದೆ ಎಂದರೆ ಸರಿ. ಆ ರೀತಿ ಪ್ರತ್ಯೇಕ ಚೆಕ್ಕುಬಂದಿಯನ್ನು ದಾವೆಯಲ್ಲಿ ನಮೂದಿಸಿರುತ್ತೇನೆ. ನಾನು ಒಟ್ಟು 2 ಎಕೆರೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ದಾವೆ ಸಲ್ಲಿಸುವ ವೇಳೆಗೆ ಸ.ನಂ.101 ರಲ್ಲಿ 2 ಎಕರೆ 20 ಗುಂಟೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸುವ ವೇಳೆಗೆ ಭೂ ಪರಿವರ್ತನೆ ಪ್ರಕಾರ ಸ.ನಂ.101/1 ರಲ್ಲಿ 1 ಎಕರೆ 14 ಗುಂಟೆ, 101/2 ರಲ್ಲಿ 1 ಎಕರೆ 6 ಗುಂಟೆಗೆ ಪ್ರತ್ಯೇಕವಾಗಿ ಆರ್ ಟಿ ಸಿ ಬರುತ್ತಿತ್ತು ಎಂದರೆ ಸರಿ. ನಾನು ಭೂ ಪರಿವರ್ತನೆಯಲ್ಲಿ ಹೇಳಿರುವ ಚೆಕ್ಕುಬಂದಿ ಮತ್ತು ದಾವಾ ಚೆಕ್ಕುಬಂದಿ ಬೇರೆ ಬೇರೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತಿನ ಪೂರ್ವಕ್ಕೆ ನಾರಾಯಣಪ್ಪ, ಮುತ್ಯಾಲಪ್ಪ, ಪಶ್ಚಿಮಕ್ಕೆ ಜುಂಜಪ್ಪನವರ ಜಮೀನು, ಉತ್ತರಕ್ಕೆ ದೊಡ್ಡನಾರಾಯಣಪ್ಪ ಮತ್ತು ಚಿಕ್ಕನಾರಾಯಣಪ್ಪನವರ ಜಮೀನು, ದಕ್ಷಿಣಕ್ಕೆ ಸರ್ಕಾರಿ ಜಮೀನು ಇರುತ್ತದೆ.

5. ಸ.ನಂ.101/1 ರ ಚೆಕ್ಕುಬಂದಿ ಪೂರ್ವಕ್ಕೆ ಸ.ನಂ.102, ಪಶ್ಚಿಮಕ್ಕೆ ಸ.ನಂ.85, ಉತ್ತರಕ್ಕೆ ಸ.ನಂ.94,95, ದಕ್ಷಿಣಕ್ಕೆ ಸ.ನಂ.101/2 ಇರುತ್ತದೆ.

6. ಸ.ನಂ.101/2 ರ ಚೆಕ್ಕುಬಂದಿ ಪೂರ್ವಕ್ಕೆ ಸ.ನಂ.106, ಪಶ್ಚಿಮಕ್ಕೆ ಸ.ನಂ.89, ಉತ್ತರಕ್ಕೆ ಸ.ನಂ.101/1, ದಕ್ಷಿಣಕ್ಕೆ ಸ.ನಂ.60 ಇರುತ್ತದೆ. ದಾವಾ ಸ್ವತ್ತು ಖಾಲಿ ಜಮೀನು ಆಗಿರುತ್ತದೆ. ಭೂ ಪರಿವರ್ತನೆಯಂತೆ ಪ್ರತ್ಯೇಕ ಸರ್ವೇ ನಂಬರ್ ನಲ್ಲಿ ದಾವೆ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಇಲ್ಲ ಎನ್ನುತ್ತಾರೆ. ನಾನು ಸುಳ್ಳು ಚೆಕ್ಕುಬಂದಿ ಹೇಳಿ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸುವ ವೇಳೆಯಲ್ಲಿ ಸ.ನಂ.101 ಆಗ ಚಾಲ್ತಿಯಲ್ಲಿರಲಿಲ್ಲ, ಸಬ್ ನಂಬರ್ ಗಳಾಗಿ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ.

7. ನಾನು ಪ್ರತಿವಾದಿಗಳ ವಿರುದ್ಧ ಪೋಲೀಸರ ಮುಂದೆ ದೂರನ್ನು ನೀಡಿರುತ್ತೇನೆ. ಆ ಎನ್.ಸಿ.ಆರ್ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಜೂನ್ 2015 ರಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ನೆನಪಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಅನುಮತಿಸಲಾಯಿತು)

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.